ಓಃಎಸ್ಃನಂ.*214/2015*
ಡಿ.ಡಬ್ಲ್ಯೂ-*1*

***ದಿಃ 05-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

**ಮುಂದುವರೆದ *ಪಾಟೀ ಸವಾಲುಃ* ವಾದಿ ಪರ ಶ್ರೀ ಟಿ ಎನ್ ಎಂ *ವಕೀಲರಿಂದ***

ತ್ಯಾಗದಬಾಗಿ ಯಲ್ಲಿರುವ ಜಮೀನುಗಳನ್ನು ನನಗೆ ಮಂಜೂರಾಗುವ ಮುಂಚೆ *10* ವರ್ಷಗಳ ಕಾಲ ಸಾಗುವಳಿ ಮಾಡುತ್ತಿದ್ದೆ. ಆ ಸಮಯದಲ್ಲಿ ನಾನು ನನ್ನ ಹೆಂಡತಿ, ಮಕ್ಕಳ ಜೊತೆ ವಾಸವಿದ್ದೆ. ನನ್ನ ತಂದೆ ರುದ್ರಪ್ಪನವರು ತ್ಯಾಗದಬಾಗಿ ಸೊಸೈಟಿಯಲ್ಲಿ ಷೇರುದಾರರಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾನು ಷೇರುದಾರ ನಾಗಿದ್ದೆ ಎಂದು ನುಡಿಯುತ್ತಾರೆ. ನಾನು ಸೊಸೈಟಿಯಲ್ಲಿ ಷೇರುದಾರ ನಾಗಿರುವ ಬಗ್ಗೆ ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯ ಸೊಸೈಟಿಯು *1980* ನೇ ಇಸವಿಯಲ್ಲಿ ಕ್ಯಾನ್ಸಲ್ ಆಗಿದ್ದು, ದಾಖಲೆಗಳು ಹೋಗಿರುತ್ತವೆಂದು ನುಡಿಯುತ್ತಾರೆ. ಸದರಿ ಸೊಸೈಟಿ ದಾಖಲೆಗಳಲ್ಲಿ ಷೇರುದಾರರಿಗೆ ಜಮೀನು ಕೊಡುವ ಬಗ್ಗೆ ಬರೆದಿರಲಿಲ್ಲ. ನಾನು ಆ ವಿಷಯವನ್ನು ಅಂದಾಜಿನ ಮೇಲೆ ಹೇಳುತ್ತಿದ್ದೇನೆ.

ತ್ಯಾಗದಬಾಗಿಯಲ್ಲಿ ಮಂಜೂರಾದ ಜಮೀನುಗಳಿಗೆ ನಾನು ಅರ್ಜಿಯನ್ನು *1998* ರಲ್ಲಿ ನೀಡಿದ್ದೆನು. ಆ ಸಮಯದಲ್ಲಿ ನನ್ನ ಹೆಸರಿಗೆ ನನ್ನ ತಂದೆಯಿಂದ ಬಂದ ಜಮೀನುಗಳು ಇದ್ದವು ಎಂದರೆ ಸರಿಯಲ್ಲ. ಗೊಂಡೇದಹಳ್ಳಿಯಲ್ಲಿರುವ ಜಮೀನುಗಳನ್ನು *1974* ರಲ್ಲಿ ವಿಭಾಗ ಮಾಡಿಕೊಳ್ಳಲಾಗಿದೆ. ಸದರಿ ವಿಭಾಗವಾದ ನಂತರ ಜಮೀನುಗಳ ಖಾತೆಯು ನನ್ನ ಹೆಸರಿಗೆ ಬಂದಿರುತ್ತವೆ. ಗೊಂಡೇದಹಳ್ಳಿಯ ಸರ್ವೆ ನಂಃ *47/1, 47/3, 16/1* ಜಮೀನುಗಳು ನನ್ನ ಹೆಸರಿಗೆ ಬಂದಿರುತ್ತವೆ. ಸದರಿ ಜಮೀನುಗಳಲ್ಲಿ ಅರ್ಧ ಭಾಗ ನನ್ನ ತಮ್ಮ ವಾದಿಗೆ ಬಂದಿರುತ್ತದೆ. ಸದರಿ ಭಾಗದ ಪ್ರಕಾರ ವಾದಿ ಹೆಸರಿಗೆ ಪಹಣಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಈಗಲೂ ಸಹ ಪಹಣಿ ಮತ್ತು ಖಾತೆ ನನ್ನ ಹೆಸರಿಗೆ ಇರುತ್ತವೆಂದರೆ ಸರಿ. *1974* ರಲ್ಲಿ ಆದ ವಿಭಾಗವು ಬಾಯಿ ಮಾತಿನಲ್ಲಿ ಆಗಿದ್ದು, ಬರವಣಿಗೆ ಆಗಿರುವುದಿಲ್ಲ. ವಿಭಾಗ ಸಮಯಕ್ಕೆ ನಾನು, ನನ್ನ ತಂದೆ ಮತ್ತು ನನ್ನ ತಮ್ಮ ವಾದಿ ಹಾಜರಿದ್ದೆವು. ನನ್ನ ತಂದೆ ತ್ಯಾಗದಬಾಗಿ ಸೊಸೈಟಿಯಲ್ಲಿ ಷೇರುದಾರನಾಗಿದ್ದರಿಂದ ಸದರಿ ಷೇರುದಾರರಿಗೆ ಜಮೀನು ನೀಡುವ ಬಗ್ಗೆ

ಬರವವಣಿಗೆಯಾಗಿದ್ದು, ಸದರಿ ಬರವಣಿಗೆಯಂತೆ ಸೊಸೈಟಿಯಿಂದ ಬಂದಂತಹ ಜಮೀನಿನಲ್ಲಿ ನನಗೂ ಹಾಗೂ ವಾದಿಗೂ ಪಾಲು ನೀಡಬೇಕೆಂದು ಬರವಣಿಗೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಬರವಣಿಗೆ ದಾಖಲೆಗೆ ನಾನು, ನನ್ನ ತಮ್ಮ ವಾದಿ ಹಾಗೂ ಸಾಕ್ಷಿದಾರರು ಸಹಿ ಹಾಕಿರುತ್ತೇವೆಂದರೆ ಸರಿಯಲ್ಲ. ನಾನು ಯಾವತ್ತೂ ಇಂಗ್ಲೀಷಿನಲ್ಲೇ ಸಹಿ ಮಾಡುತ್ತೇನೆ. ನನ್ನ ತಮ್ಮ ವಾದಿ ಸಹ ಇಂಗ್ಲೀಷಿನಲ್ಲೇ ಸಹಿ ಮಾಡುತ್ತಾನೆಂದರೆ ಸರಿ.

ಸಾಕ್ಷಿಗೆ ***1984*** ರ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ನಾನು ಅದಕ್ಕೆ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ತ್ಯಾಗದಬಾಗಿಯಲ್ಲಿರುವ ಜಮೀನಿನಲ್ಲಿ ನನ್ನ ತಮ್ಮ ವಾದಿಗೆ ಅರ್ಧ ಭಾಗ ಕೊಡಬೇಕೆಂದು ಬರವಣಿಗೆ ಆಗಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ವಾದಿಗೆ ಸಮವಾದ ಭಾಗ ಇದೆ ಎಂದರೆ ಸರಿಯಲ್ಲ. ಇದುವರೆಗೂ ದಾವಾಸ್ವತ್ತುಗಳಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆಯ ಹಿರಿಯ ಮಗನಾಗಿದ್ದರಿಂದ ನನ್ನ ಹೆಸರಿಗೆ ಎಲ್ಲಾ ಜಮೀನುಗಳ ಪಹಣಿ ಬಂದಿರುತ್ತದೆಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಜಮೀನಿನ ಪಹಣಿಗಳು ಇರುವುದರಿಂದ ವಾದಿಗೆ ಮೋಸ ಮಾಡುವ ದುರುದ್ದೇಶದಿಂದ ಜಮೀನುಗಳ ಮೇಲೆ ಸಾಲ ಪಡೆದಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗೊಂಡೇದಹಳ್ಳಿ ಆಸ್ತಿಯ ಮೇಲೆ ಸಾಲ ಮಾಡಿದ್ದು, ಅದರಲ್ಲಿ ಅರ್ಧ ದುಡ್ಡು ವಾದಿಗೆ ನೀಡಿರುತ್ತೇನೆಂದು ನುಡಿಯುತ್ತಾರೆ. ನಾನು ಸಾಲ ಪಡೆದು ವಾದಿಗೆ ಅರ್ಧ ದುಡ್ಡು ನೀಡಿರುವ ಬಗ್ಗೆ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ನಾನು ಮಾಡಿದ ಸಾಲದಲ್ಲಿ ಅರ್ಧ ಹಣವನ್ನು ವಾದಿಗೆ ನೀಡಿರುವ ಬಗ್ಗೆ ಸಾಕ್ಷಿಗಳು ಇರುವುದಿಲ್ಲ ಎಂದರೆ ಸರಿ. ನಾನು ಒಟ್ಟು ಕುಟುಂಬದ ಆಸ್ತಿಯ ಮೇಲೆ ಸಾಲ ಮಾಡಿ ಎಲ್ಲಾ ಹಣವನ್ನು ನಾನೇ ಬಳಸಿಕೊಂಡಿರುತ್ತೇನೆಂದರೆ ಸರಿಯಲ್ಲ.

ವಾದಿಗೆ ಅರ್ಧ ಆಸ್ತಿ ನೀಡಬೇಕೆನ್ನುವ ಕಾರಣಕ್ಕೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ತ್ಯಾಗದಬಾಗಿಯಲ್ಲಿರುವ ಜಮೀನು ನನ್ನ ತಂದೆಯವರಿಗೆ ಸೇರಿದ್ದಾಗಿದ್ದು, ನಾನು ಮನೆಯ ಹಿರಿಯ ಮಗನಾಗಿದ್ದು, ನನ್ನ ತಂದೆಯ ಮರಣದ ನಂತರ ನನ್ನ ಹೆಸರಿಗೆ ಸಾಗುವಳಿ ಚೀಟಿ ನೀಡಿರುತ್ತಾರೆಂದರೆ ಸರಿಯಲ್ಲ. ತ್ಯಾಗದಬಾಗಿ ಜಮೀನಿನಲ್ಲಿ ನಾನು, ನನ್ನ ತಮ್ಮ ವಾದಿ ಹಾಗೂ ನನ್ನ ತಂದೆ ಸೇರಿ ನನಗೆ ಮಂಜೂರಾಗುವ ಮುಂಚಿತವಾಗಿ ಸಾಗುವಳಿ ಮಾಡುತ್ತಿದ್ದೆವು ಎಂದರೆ

ಸರಿಯಲ್ಲ. ವಾದಿಯ ದಾವಾ ಸಲ್ಲಿಸುವ  ಪೂರ್ವದಲ್ಲಿ ವಕೀಲರ ಮೂಲಕ ನನಗೆ ನೋಟೀಸು ನೀಡಿದ್ದರು ಎಂದರೆ ನನಗೆ ನೋಟೀಸು ತಲುಪಿರುವುದಿಲ್ಲ. ಕೋರ್ಟ್ ನೋಟೀಸು ಬಂದ ನಂತರ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ.

**<u>ಮರು ವಿಚಾರಣೆ</u> : ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ.ರವರು, ತರೀಕೆರೆ.***